<u>ದಿನಾಂಕ **08.01.2025** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಸಿ ಕೆ ಎಂ ವಕೀಲರಿಂದಃ</u>

5. ದಾವಾ ಆಸ್ತಿ ಒಟ್ಟು 4 ಎಕರೆ 18 ವರೆ ಗುಂಟೆ ಇದೆ ಎಂದರೆ ನಿಜ. ಇದರಲ್ಲಿ ರಾಷ್ಟ್ರೀಯ ಹೆದ್ದಾರಿಗೆ 74 ಗುಂಟೆ ಭೂ ಸ್ವಾಧೀನವಾಗಿರುತ್ತದೆ. ಉಳಿದ ಆಸ್ತಿಯನ್ನು ವಾದಿ ಪಡೆಯುತ್ತೇನೆಂದು ಪ್ರತ್ಯುತ್ತರದಲ್ಲಿ ನನಗೆ ತಿಳಿಸಿರುತ್ತಾರೆಂದರೆ ಸುಳ್ಳು. ದಾವಾ ಆಸ್ತಿ ರಮೇಶ್ ರೆಡ್ಡಿರವರ ಈಗ ಕ್ರಯದ ಆಧಾರದ ಮೇಲೆ ದಾಖಲೆ ಬರುತ್ತಿದೆ ಕ್ರಯ ಪತ್ರವನ್ನು 2017 ರಲ್ಲಿ 4 ಕೋಟಿ 91 ಲಕ್ಷಕ್ಕೆ ಮಾಡಿಕೊಟ್ಟಿರುತ್ತೇವೆ. ಈ ಬಗ್ಗೆ ತಕರಾರಿನಲ್ಲಿ ತಿಳಿಸಿಲ್ಲ. ತಡೆಯಾಜ್ಞೆ ತೆರವು ಆದ ನಂತರ ಮಾರಾಟ ಮಾಡಿರುತ್ತೇವೆ. ಸದರಿ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ವಾದಿಗೆ ಮೋಸ ಮಾಡಲು ರಮೇಶ್ ರೆಡ್ಡಿ ಜೊತೆ ಶಾಮೀಲಾಗಿ ರೆವೆನ್ಯೂ ದಾಖಲೆಯಲ್ಲಿ ನಮೂದು ಮಾಡಿರುತ್ತೇವೆಂದರೆ ಸುಳ್ಳು. ಖರೀದಿ ಬಗ್ಗೆ ಸಾಕ್ಷಿ ಪತ್ರದಲ್ಲಿ ತಿಳಿಸಿಲ್ಲ ಎಂದರೆ ನಿಜ ಮೇಲ್ಮನವಿಯಲ್ಲಿಯೂ ಸಹ ಕ್ರಯದ ಬಗ್ಗೆ ತಿಳಿಸಿಲ್ಲ ಎಂದರೆ ನಿಜ ಮೇಲ್ಮನವಿ ಎಂ ಎ 5/2018 ರಲ್ಲಿ ತಡೆಯಾಜ್ಞೆಯಾಗಿತ್ತು ಎಂದರೆ ನಿಜ. ಇದರ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿಲ್ಲ. ಕ್ರಯ ದ ದಿನಾಂಕ ಆಗಸ್ಟ್2017 ರಲ್ಲಿ ಆಗಿರುತ್ತದೆ. ಈ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ.

6.ನಿಡಿ-1 ಕರಾರು ಪತ್ರದಲ್ಲಿ canceled ಎಂದು ಬರೆದಾಗ ರಾಮಕೃಷ್ಣ ಮ್ಯಾನೇಜರ್ ರವರು ಇದ್ದರು. ಅವರ ಸಹಿಯನ್ನು ಪಡೆದಿಲ್ಲ. ನಾನು ಸಹ ಸಹಿ ಮಾಡಿಲ್ಲ. ನಿಡಿ-1 ರಲ್ಲಿ 30 ಲಕ್ಷ ಹಿಂದಿರುಗಿಸಿದ ಬಗ್ಗೆ ಉಲ್ಲೇಖ ಇಲ್ಲ. ಈ ಎಲ್ಲಾ ವಿಷಯವನ್ನು ಬರೆಯಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಅವರು ಹೇಳಲಿಲ್ಲ ಎಂದು ನುಡಿಯುತ್ತಾರೆ. ಈ ನಿಡಿ-1 ಕರಾರು ಪತ್ರದಲ್ಲಿ canceled ಪದವನ್ನು ನಾನು ಸೃಷ್ಟಿ ಮಾಡಿದ್ದೇನೆಂದರೆ ಸುಳ್ಳು. ನಿಡಿ-1 ಮೂಲ ಕರಾರು ಪತ್ರವನ್ನು ಮೋಸದಿಂದ ಪಡೆದಿದ್ದೇನೆಂದರೆ ಸುಳ್ಳು. ನಿಪಿ-2 ಅನ್ನು ಸೃಷ್ಟಿಸಿ ವಾದಿಯ ಮ್ಯಾನೇಜರ್

ಗೆ ಕೊಟ್ಟಿರುತ್ತೇನೆಂದರೆ ಸುಳ್ಳು. 30 ಲಕ್ಷ ಹಣ ಹಿಂದಿರುಗಿಸಿದ ಬಗ್ಗೆ ಕರಾರು ಪತ್ರ ಇದೆ. ಕಲರ್ ಕರಾರು ಪತ್ರ ನೀಡಿ ಮೂಲ ಕರಾರು ಪತ್ರವನ್ನು ಪಡೆದ ಬಗ್ಗೆ ನನ್ನ ವಿರುದ್ಧ ವಾದಿ ಬೆಂಗಳೂರಿನ ಮಲ್ಲೇಶ್ವರಂ ಠಾಣೆಯಲ್ಲಿ ದೂರು ನೀಡಿದ್ದಾರೆಂದರೆ ನಿಜ. ನಿಡಿ-1 ಕರಾರು ಪತ್ರದಲ್ಲಿcanceled ಪದವನ್ನು ಬರೆದ ದಿನಾಂಕ ಅಂದರೆ ಸಾಕ್ಷಿ ಮಾರ್ಚ್ 2016 ರಲ್ಲಿ ಬರೆದಿರುತ್ತಾರೆ. ಈ ದಿನಾಂಕವನ್ನು ಬರೆಯಲು ಸಾಕ್ಷಿಯು ಅವರು ಕೇಳಲಿಲ್ಲ ಎಂದು ನುಡಿಯುತ್ತಾರೆ. ನಿಡಿ-1 ಅನ್ನು ಪಡೆದು ರಾಮಕೃಷ್ಣರವರಿಗೆ ಹಣ ಕೊಟ್ಟ ಬಗ್ಗೆ ದಾಖಲೆ ಇಲ್ಲ. ನಿಡಿ-1 ಕರಾರು ಪತ್ರದಲ್ಲಿ canceled ಎಂದು ಪದವನ್ನು ಬರೆದು ನನ್ನ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಹೇಳುತ್ತಿದ್ದೇನೆಂದರೆ ಸುಳ್ಳು. ವಾದಿಗೆ ಮೋಸ ಮಾಡಲು ಈ ದಾವಾ ಹಾಕಿದ ನಂತರ ರಮೇಶ್ ರೆಡ್ಡಿಗೆ ಖಾತಾ ವರ್ಗಾವಣೆ ಮಾಡಿರುತ್ತೇನೆಂದರೆ ಸುಳ್ಳು. ನಾನು ತಪ್ಪಿಸ್ಥನಾಗುತ್ತೇನೆಂದು ಕ್ರಯ ಪತ್ರವನ್ನು ಹಾಜರುಪಡಿಸುತ್ತಿಲ್ಲ ಎಂದರೆ ಸುಳ್ಳು. ನಾನು ಯಾವುದೇ ಹಣವನ್ನು ಹಿಂದಿರುಗಿಸಿಲ್ಲ ಎಂದರೆ ಸುಳ್ಳು. ನಿಪಿ-2 ರ ಪ್ರಕಾರ ಹೊಣೆಗಾರಿಕೆಯಿಂದ ತಪ್ಪಿಸಿಕೊಂಡು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.